# ಕಾಲ

'ಕಾಲ' ಒಂದು ವಸ್ತುವಿನ ಸೃಷ್ಟಿ ಮತ್ತು ಲಯಗಳ ಪ್ರಾರಂಭ ಮತ್ತು ಅಂತ್ಯವನ್ನು ಸೂಚಿಸುತ್ತದೆ. ಒಂದು ವಸ್ತು, ಘಟನೆ, ಸಂಗತಿ–ಮುಂತಾದ ಸಮಸ್ತ ಲೋಕ ವ್ಯವಹಾರಗಳೆಲ್ಲವೂ ಈ 'ಕಾಲ'ದ ನಿಯಂತ್ರಣದಲ್ಲೇ ಸಾಗುತ್ತವೆ. 'ಕಾಲ' ಸೃಷ್ಟಿಯ ಸಮಸ್ತದ ಚಲನಶೀಲತೆಯನ್ನು ಮತ್ತು ಅದರ ನಿಲುಗಡೆಯ ಹಂತವನ್ನು ನಿರ್ಧರಿಸುತ್ತದೆ. ಇಲ್ಲಿ ನಿಲುಗಡೆ ಎಂದರೆ ಮುಕ್ತಾಯವಲ್ಲ. ಒಂದು ಸಂಗತಿ, ಒಂದು ಘಟನೆ ಅಥವಾ ಒಂದು ಜೀವಿಯ ಸರಪಳಿಯಾಕಾರದ ಚಲನಶೀಲತೆಯನ್ನು 'ಕಾಲ' ರೂಪಿಸಿಬಿಡುತ್ತದೆ. ಅಂದರೆ ಒಂದು ಸಂಗತಿ, ಒಂದು ಘಟನೆ ಅಥವಾ ಒಂದು ಜೀವಿಯ ಕೊನೆಯಲ್ಲಿಯೇ ಮತ್ತೊಂದು ಸಂಗತಿ, ಘಟನೆ ಅಥವಾ ಜೀವಿಯ ಪ್ರಾರಂಭದ ಘಳಿಗೆಯಾಗಿಬಿಡುತ್ತದೆ. ಇದು 'ಕಾಲ' ಜಗತ್ತನ್ನು ನಿರ್ವಹಿಸಿಕೊಂಡು ಬಂದಿರುವ ಪರಿ.

'ಕಾಲ' ಎಂಬುದು ಒಂದು ಸರಳ ರೇಖೆಯ ಆದಿ ಮತ್ತು ಅಂತ್ಯವೆಂದು ನಾವು ಪರಿಭಾವಿಸಿದರೆ, ಈ ಆದಿ ಮತ್ತು ಅಂತ್ಯದ ನಡುವಿನ ಅವಧಿಯನ್ನು ನಾವು ಬದುಕು ಎಂದು ತಿಳಿಯಬೇಕಾಗುತ್ತದೆ. 'ಕಾಲ'ದ ಆರಂಭ ಬದುಕಿನ ಎಳಸುಕಾಯಿಯ ಸ್ವರೂಪದಾಗಿದ್ದು, ಅದರಲ್ಲಿ ಕೋಮಲತೆ, ಮುಗ್ಧತೆ ಪ್ರಧಾನ ಗುಣಗಳಾಗಿರುತ್ತವೆ. 'ಕಾಲ'ದ ಮಧ್ಯಭಾಗವು ಗಡಸಾಗಿದ್ದು ತನ್ನ ರುಚಿಯಲ್ಲಿ ಹೆಚ್ಚು ಒಗರನ್ನು, ಹುಳಿಯನ್ನು ಒಳಗೊಂಡಿರುತ್ತದೆ. ಈ ಎರಡು ಹಂತಗಳು ಬದುಕಿನ ಸತ್ವವನ್ನು ಸಂಪೂರ್ಣವಾಗಿ ಗ್ರಹಿಸುವ ಮನಸ್ಥಿತಿಯನ್ನು ಹೊಂದಿರುವುದಿಲ್ಲ. ಅಲ್ಲಿ ಅನುಭವದ ಕೊರತೆ. ಆತುರದ ಚಪಲತೆ, ವಿವೇಚನೆ ಇಲ್ಲದ ತೀರ್ಮಾನದ ನಡೆ– ಕಂಡುಬರುವ ಸಾಧ್ಯತೆಯೇ ಹೆಚ್ಚು. ಈ ಹಂತಗಳಲ್ಲಿ ಕೆಲವು ಆಕಸ್ಮಿಕ ಸಂದರ್ಭಗಳಲ್ಲಿ ಬದುಕು ಕೊನೆಯಾಗಬಹುದು. ಆದರೆ ಈ ಕೊನೆ ಸಹಜವಾಗಿ ಸಂಭವಿಸಿದ ಕೊನೆಯಲ್ಲ. ಇಲ್ಲಿ ಬದುಕು ಇನ್ನು ತಿಳಿಯಬೇಕಾದದ್ದು, ಕಲಿಯಬೇಕಾದದ್ದು ಬಾಕಿ ಉಳಿದುಕೊಂಡು ಬಿಟ್ಟಿರುತ್ತದೆ. ಇಂತಹ ಸಂದರ್ಭದಲ್ಲಿ ಕೊನೆಯಾಗುತ್ತಿರುವ ಬದುಕಿಗೂ ಮತ್ತು ಅದರ ಸುತ್ತಲ ಆವರಣಕ್ಕೂ ಒಂದು ಬಗೆಯ ಅತೃಪ್ತಿ ಉಳಿದುಬಿಡುತ್ತದೆ.

'ಕಾಲ'ದ ನಡೆಯಲ್ಲಿ ಅತೃಪ್ತಿಯಿಲ್ಲದ ಘಟ್ಟವೇ ಅದರ ಅಂತ್ಯದ ಸಮಯ. ಈ ಅಂತ್ಯದ ಸಮಯದಲ್ಲಿ ಬದುಕು ತನ್ನ ಎಳಸುತನವನ್ನು, ಕೋಮಲತೆಯನ್ನು, ಒಗರುತನವನ್ನು ಮತ್ತು ಹುಳಿಯತನವನ್ನು ಕಳೆದುಕೊಂಡು ಮಾಗುತ್ತದೆ. ತನ್ನ ಅಪಾರವಾದ ಬದುಕಿನ ನಡೆಯಲ್ಲಿ ವಿಶಿಷ್ಟ ಬಗೆಯ ಸವಾಲುಗಳನ್ನು ಎದುರಿಸಿ, ಅನೇಕ ಬಗೆಯ ಮನೋವೃತ್ತಿಗಳ ಜೊತೆ ಸಂಘರ್ಷಿಸಿ, ಸುಖ–ದುಃಖ, ಕಷ್ಟ–ಕೋಟಲೆಗಳಲ್ಲಿ ಮಿಂದು–ಬೆಂದು ಮೈ ಮನಸ್ಸುಗಳು ಅರಳಿರುತ್ತವೆ. ಈ ಅರಳುವಿಕೆಯಲ್ಲಿ ತನ್ನೆಲ್ಲಾ ದುಡುಕು ದುಮ್ಮಾನಗಳನ್ನು, ಸೇಡು ಕೋಪ ತಾಪಗಳನ್ನು ಕಳೆದುಕೊಂಡು ತನ್ನ ಸುತ್ತಲ ಪರಿಸರಕ್ಕೆ ಏನನ್ನಾದರೂ ಒಳಿತನ್ನು ಮಾತ್ರ ಬಿಟ್ಟು ಹೋಗುವ ಮನೋಸ್ಥಿರತೆ ಮೂಡುತ್ತದೆ. ಈ ಮನೋಸ್ಥಿರತೆಯು ತನ್ನ ಬಾಲ್ಯ ಯೌವನಗಳ ವೈಯಕ್ತಿಕ ಸ್ವಾರ್ಥ ಮೋಹಗಳ ಬಂಧನದಿಂದ ಬಿಡುಗಡೆಗೊಂಡು ಸಾಮಾಜಿಕವಾಗುವ ಸ್ಥಿತಿ. ವ್ಯಕ್ತಿ ಈ ಸ್ಥಿತಿಗೇರಿದಾಗ ಮಾತ್ರ ಅವನು ತನ್ನ ಅಂತ್ಯದಲ್ಲಿ ತನ್ನ ಸುತ್ತಲ ಸಮಾಜಕ್ಕೆ ಕೇವಲ ಸಿಹಿಯನ್ನು ಕೊಡುವ ಹಣ್ಣಾಗುತ್ತಾನೆ. 'ಕಾಲ'ದ ಈ ಅಂತ್ಯದ ಗೆರೆಯ ಸ್ಥಿತಿ ಎಲ್ಲದರಲ್ಲೂ ಮೂಡಬೇಕು. ಒಂದುವೇಳೆ ಅಂತ್ಯದ ಈ ಪರಿಪಕ್ವ ಸ್ಥಿತಿ ಮೂಡದಿದ್ದಲ್ಲಿ ಅದಕ್ಕೆ 'ಕಾಲ' ಕಾರಣವಲ್ಲ. ವ್ಯಕ್ತಿ ಬದುಕನ್ನು ಗ್ರಹಿಸಲಾಗದ, ತನ್ನ ಒಗರುತನವನ್ನು ಕಳೆದುಕೊಳ್ಳಲಾಗದ ವಿಫಲತೆಯೇ ಇದಕ್ಕೆ ಕಾರಣ.

ನಮ್ಮಲ್ಲಿ ಸಾವನ್ನು 'ಕಾಲ' ಎಂದು ಕರೆಯುತ್ತಾರೆ. 'ಕಾಲನ ಕರೆ ಬಂತು' ಎಂದರೆ ಸಾವು ಬಂದು ಅಪ್ಪಳಿಸಿತು ಎಂದೇ ಅರ್ಥ. ನಮ್ಮ ಪುರಾಣದಲ್ಲಿ ಸಾವಿಗೂ ಒಬ್ಬ ದೇವರಿದ್ದಾನೆ! ಅವನೇ 'ಯಮ'. 'ಯಮ' ಎಂದರೆ ಕಾಲವೆಂದೇ ಅರ್ಥ. ಪ್ರತಿಯೊಬ್ಬ ಅಥವಾ ಪ್ರತಿಯೊಂದು ವಸ್ತು ಮತ್ತು ಜೀವಿಗೆ ಸೃಷ್ಟಿ ಇರುವಂತೆಯೇ ಅಂತ್ಯವೂ ಇರುತ್ತದೆ. ಈ ಸೃಷ್ಟಿ ಮತ್ತು ಅಂತ್ಯದ ಅವಧಿಯನ್ನು ನಿಗದಿ ಮಾಡಿ ಅಂತ್ಯ ಬಂದ ಕೂಡಲೇ ಆ ವ್ಯಕ್ತಿ ಅಥವಾ ವಸ್ತು ವಿಶೇಷವನ್ನು ತನ್ನಲ್ಲಿಗೆ ಕರೆದುಕೊಂಡುಬಿಡುವ ಉದ್ಯೋಗ ಇವನದು. ಈ ಪೌರಾಣಿಕ ಪರಿಕಲ್ಪನೆಯೂ ಕೂಡ 'ಕಾಲ'ದ ಅನಿವಾರ್ಯತೆಯನ್ನು ಮತ್ತು ಅದು ಈ ಜಗತ್ತಿನಲ್ಲಿ ನಿರ್ವಹಿಸುವ ಕೆಲಸವನ್ನು ಪ್ರತಿಧ್ವನಿಸುತ್ತದೆ. ಜಗತ್ತಿನಲ್ಲಿ ಉಸಿರಾಡುವ ಜೀವಿಗಳಾಗಲೀ, ಉಸಿರಾಡದ ಘನವಸ್ತುಗಳಾಗಲೀ ಈ ಕಾಲದ ನಿಯಮಕ್ಕೊಳಪಟ್ಟು ಇರಲೇಬೇಕಾಗುತ್ತದೆ. ಹಾಗಿದ್ದಾಗ ಮಾತ್ರ ಸೃಷ್ಟಿಯಲ್ಲಿ ಹಳೆಯದು ಹೋಗಿ; ಹೊಸತನ, ಮುಗ್ಧತೆ, ಕೋಮಲತೆ ಮತ್ತು ಯೌವ್ವನದ ಬಿರುಸುಗಳು ಮೂಡಲು ಸಾಧ್ಯ!

■ ಶಿಕಾಕು

## ಮಾತೇ ಮುತ್ತು

★ ನೀನು ಪಡೆಯಬೇಕೆಂದು ಬಯಸಿದರೆ ಅರ್ಪಿಸುವುದನ್ನು ಮೊದಲು ಮಾಡು. ಇದು ಸನಾತನ ನಿಯಮ.

–ಸುಭಾಷ್ ಚಂದ್ರ ಬೋಸ್

★ ನಂಬಿಕೆಯೇ ಯಶಸ್ಸಿಗೆ ಮೂಲಾಧಾರ. ನಂಬಿಕೆಯಿಲ್ಲದಿದ್ದರೆ ಆ ಕಾರ್ಯ ಸಿದ್ಧಿಸುವುದಿಲ್ಲ. ಸುಖದ ಅನುಭವಕ್ಕೆ ನಂಬಿಕೆ ಮುಖ್ಯ.

–ಅರವಿಂದ

★ ನಮ್ರತೆ ಅನುಕರಣೆಗೆ ಯೋಗ್ಯವಾದ ಒಳ್ಳೆಯ ಗುಣ. ಅಹಂಕಾರವಿಲ್ಲದ ಸಜ್ಜನಿಕೆಯ ಪ್ರದರ್ಶನವೇ ದೀನತೆ. ಆದರೆ ದೀನತೆ ದೌರ್ಬಲ್ಯವಲ್ಲ. ಅದು ಗಟ್ಟಿತನದ ಇನ್ನೊಂದು ಮುಖ.

–ಕಬೀರ

★ ಜೀವನ ಹಾಳಾಗುವುದರಿಂದ ಹೇಗೆ ಬಚಾವು ಆಗಬೇಕು ಎಂದು ಯೋಚಿಸುತ್ತಲೇ ಬಹುಭಾಗ ಜೀವನ ಕಳೆದು ಹೋಗುತ್ತದೆ. ಇದರಿಂದ ಜೀವನ ಹಾಳಾಗುತ್ತದೆ.

–ಎಮರ್ಸನ್

★ ನಿಮ್ಮ ಗುರಿ ಸೇವೆಯಾಗಿರಲಿ, ಅದನ್ನು ಗೆಲುವಿಗಾಗಿ ಮಾಡಬೇಡಿ. ಗೆಲುವು ತನ್ನಷ್ಟಕ್ಕೆ ನಿಮ್ಮನ್ನು ಹುಡುಕಿಕೊಂಡು ಬರುತ್ತದೆ.

–ವಿನೋಬಾ ಭಾವೆ

★ ಪ್ರತಿಯೊಂದು ವಿಪತ್ತು ಒಬ್ಬ ಮನುಷ್ಯನಲ್ಲಿ ದೃಢತೆಯನ್ನು ತಂದುಕೊಟ್ಟರೆ, ಇನ್ನೊಬ್ಬನಲ್ಲಿ ದುರ್ಬಲತೆ, ಶಿಥಿಲತೆಯನ್ನುಂಟು ಮಾಡುತ್ತದೆ.

–ಲೆನಿನ್

★ ಸತತ ಸಫಲತೆ ಜಗತ್ತಿನ ಒಂದು ಮಗ್ಗಲನ್ನು ಪ್ರದರ್ಶಿಸಿದರೆ, ವಿಪತ್ತುಗಳು ಅದರ ಇನ್ನೊಂದು ಮಗ್ಗಲು ಪ್ರದರ್ಶಿಸುತ್ತವೆ.

–ಕೋಲ್ಟನ್

★ ಕಷ್ಟಗಳು ಎದುರಾದಾಗ ಸಿದ್ಧಾಂತಗಳ ಪರೀಕ್ಷೆಯಾಗುತ್ತದೆ. ಕಷ್ಟಗಳಿಗೆ ಸಿಲುಕದ ಮನುಷ್ಯ ತಾನು ಪ್ರಾಮಾಣಿಕನೇ ಅಥವಾ ಇಲ್ಲವೇ ಎಂದು ತಿಳಿಯಲಾರ.

–ಫೀಲ್ಡಿಂಗ್

★ ಯಾರಿಗೆ ಸಂತೋಷ ಬೇಕಾಗಿದೆ ಅವರು ಆನಂದವನ್ನು ಹಂಚಬೇಕು.

–ಬೈರನ್

★ ಸ್ನೇಹವನ್ನು ಯಾರು ಬೇಕಾದರೂ ಬೆಳೆಸುತ್ತಾರೆ. ಕೆಲವರು ಮಾತ್ರ ಅದನ್ನು ಉಳಿಸಿಕೊಳ್ಳುತ್ತಾರೆ. ಭಿನ್ನಾಭಿಪ್ರಾಯ ಇದ್ದರೂ ಅದನ್ನು ಉಳಿಸಿಕೊಳ್ಳುವವರದ್ದೇ ನಿಜವಾದ ಸ್ನೇಹ.

–ಪು.ತಿ.ನರಸಿಂಹಾಚಾರ್

★ ಎಲ್ಲರೂ ಸುಖಿಗಳು, ನನಗೆ ಮಾತ್ರ ಕಷ್ಟ ಬಂದಿದೆ ಎಂದು ಕೊರಗದಿರಿ. ಕಷ್ಟದ ನಂತರ ಬರುವ ಸುಖದ ದಿನಗಳನ್ನು ನೆನಪಿಸಿಕೊಳ್ಳಿ.

–ಅಜ್ಞಾತ

★ ಆಸಕ್ತಿಯೆಂಬ ಮದ್ಯವನ್ನು ಹೀರಿ, ಮಾಯೆಯೆಂಬ ಔಷಧವನ್ನು ನಾನು ಸೇವಿಸುತ್ತೇನೆ. ಇದರಿಂದ ನನ್ನ ಉತ್ಸಾಹ ಎಂದಿಗೂ ಕಮ್ಮಿಯಾಗುವುದಿಲ್ಲ.

–ಎಚ್.ಜಿ.ವೆಲ್ಸ್